C.C,No.476/2021 cross of CW 1/ PW 2

ದಿನಾಂಕ 02-06-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು :** ಆರೋಪಿಯ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಅರ್ಲವಾಡ ಗ್ರಾಮದವನು. ಚಾಸಾ 6 ಮತ್ತು 7 ರವರು ನನ್ನ ತಂದೆ ತಾಯಿ, ಚಾಸಾ 8 ರವರು ನಮ್ಮ ಚಿಕ್ಕಪ್ಪನ ಮಗ. ಅರ್ಲವಾಡದಿಂದ ಅಳ್ನಾವರ 5 ಕಿ.ಮೀ ದೂರದಲ್ಲಿ ಇದೆ ಎಂದರೆ ಸರಿ. ನಾನು ಅರ್ಲವಾಡದಿಂದ ಮಧ್ಯಾಹ್ನ 03-30 ರಿಂದ 04-00 ಗಂಟೆಗೆ ಬಿಟ್ಟು ಅಳ್ನಾವರಕ್ಕೆ ಬೈಕ್ ನಲ್ಲಿ ಹೋಗಿದ್ದೆ. ಅಳ್ನಾವರಕ್ಕೆ ತಲುಪಲು 15 ನಿಮಿಷ ಬೇಕಾಗುತ್ತದೆ. ನಾನು ವಾಪಸ್ ಬಂದಾಗ 06-00 ಗಂಟೆ ಆಗಿತ್ತು. ಘಟನೆ ಆದಾಗ ನಾನು ಅಳ್ನಾವರದಲ್ಲಿ ಇದ್ದೆ ಎಂದರೆ ಸರಿ. ಹಾಗಾಗಿ ಘಟನೆಯನ್ನು ನಾನು ನೋಡಿಲ್ಲ ಎಂದರೆ ಸರಿ. ನಮ್ಮ ಮನೆಯ ಸಂಖ್ಯೆ 227. ನಮ್ಮ ಮನೆಯ ಹಿತ್ತಲು 30 ಅಡಿ ಇದೆ ಎಂದರೆ ಸರಿಯಲ್ಲ, ಸಾಕ್ಷಿ ನಮ್ಮ ಮನೆಯಿಂದ 5 ಅಡಿ ಮಾತ್ರ ನಮ್ಮ ಜಾಗ ಎನ್ನುತ್ತಾರೆ. 5 ಅಡಿ ಹಿತ್ತಲಿಗೆ ತಾಗಿ ಆರೋಪಿತನ ಮನೆ ಇದೆ ಎಂದರೆ ಸರಿಯಲ್ಲ, ಖುಲ್ಲಾ ಜಾಗ ಇದೆ ಎನ್ನುತ್ತಾರೆ. ಆರೋಪಿತರ ಮನೆಯ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ಘಟನಾ ಜಾಗದ ಚಕ್ಕುಬಂದಿಯ ಪಶ್ಚಿಮಕ್ಕೆ ಮುಖ ಮಾಡಿ ನಮ್ಮ ಮನೆ ಇದೆ, ಪೂರ್ವಕ್ಕೆ ಆರೋಪಿತನ ಮನೆ ಇದೆ, ದಕ್ಷಿಣಕ್ಕೆ ಖುಲ್ಲಾ ಜಾಗ ಮತ್ತು ಉತ್ತರಕ್ಕೆ ಪ್ರಕಾಶ ನಾವದಗಿ ರವರ ಮನೆ ಬರುತ್ತದೆ ಎನ್ನುತ್ತಾರೆ. ನಮ್ಮ ಮನೆಯ ತಗಡಿನ ಶೀಟ್ ಗೆ ಸುಮಾರು 20-30 ರಂಧ್ರಗಳು ಬಿದ್ದಿದ್ದವು. ನಮ್ಮ ಮನೆಯ ತಗಡಿಗೆ 20-30 ರಂಧ್ರಗಳು ಬಿದ್ದಿದ್ದವು ಎಂದು ದೂರಿನಲ್ಲಿ ಬರೆದಿದ್ದೀರಾ ಎಂದರೆ ಸಾಕ್ಷಿ ನನಗೆ ನೆನಪು ಇಲ್ಲ ಎನ್ನುತ್ತಾರೆ. ನಮ್ಮ ಮನೆಯ ತಗಡಿನ ಶೀಟಗಳು ಕಟ್ಟಾಗಿ ಬಿದ್ದಿರಲಿಲ್ಲ ಅವುಗಳಿಗೆ ರಂಧ್ರಗಳು ಬಿದ್ದು ಹರಿದಿದ್ದವು ಎನ್ನುತ್ತಾರೆ. ಸದರಿ ತಗಡುಗಳನ್ನು ಪೊಲೀಸರು ಜಪ್ತುಪಡಿಸಿಕೊಂಡಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಪೊಲೀಸರು ನನ್ನ ಸಮಕ್ಷಮ ಬರೆದರು ಎನ್ನುತ್ತಾರೆ. ಪಂಚನಾಮೆಯನ್ನು ಹೂಗಾರ ಪೊಲೀಸರು ಬರೆದರು ಎನ್ನುತ್ತಾರೆ. ಪೊಲೀಸರು ಒಂದೇ ಪಂಚನಾಮೆಯನ್ನು ಬರೆದು ನನ್ನಿಂದ ಸಹಿ ಪಡೆದಿರುತ್ತಾರೆ. ಪಂಚನಾಮೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ತಗಡಿನ ಶೀಟ್ ಗಳು ಎಷ್ಟು ಉದ್ದ ಹರಿದಿದ್ದವು ಎಂದರೆ ಸಾಕ್ಷಿ 2-3 ಇಂಚು ಹರಿದಿದ್ದವು ಎನ್ನುತ್ತಾರೆ. ಕೆಲವು ಸಣ್ಣ ಸಣ್ಣ ರಂಧ್ರಗಳು ಬಿದ್ದಿದ್ದವು. ಸದರಿ ವಿಷಯವನ್ನು ಪಂಚನಾಮೆ ಬರೆಯುವಾಗ ಹೇಳಿದ್ದೇವು. ಕಚ್ಚಾ ನಕಾಶೆಯನ್ನು ತಯಾರಿಸಲು ಮಾಹಿತಿಯನ್ನು ನಾನೇ ನೀಡಿದ್ದೇನೆ ಎನ್ನುತ್ತಾರೆ. ಕಚ್ಚಾ ನಕಾಶೆಯಲ್ಲಿ ನಿಮ್ಮ ಸಹಿ ಇಲ್ಲ ಎಂದರೆ ಸರಿ. ಕಚ್ಚಾ ನಕಾಶೆ ಅಳತೆಗೆ ಅನುಗುಣವಾಗಿಲ್ಲ ಎಂದರೆ ಸರಿ. ಭಾವಚಿತ್ರಗಳನ್ನು ಪೊಲೀಸರು ತೆಗೆದಿರುತ್ತಾರೆ ಎನ್ನುತ್ತಾರೆ. ಭಾವಚಿತ್ರಗಳ ಮೇಲೆ ನಿಮ್ಮ ಮತ್ತು ಪಂಚರ ಸಹಿ ಇಲ್ಲ

ಎಂದರೆ ಸರಿ. ಬಂದೂಕನ್ನು ನಿಮ್ಮ ಮತ್ತು ಪಂಚರ ಸಮಕ್ಷಮ ಪರಿಶೀಲನೆ ಮಾಡಿದ್ದಾರಾ ಎಂದರೆ ಸಾಕ್ಷಿ ಪೊಲೀಸರು ಆರೋಪಿತನ ಮನೆಯಲ್ಲಿ ಬಂದೂಕನ್ನು ಹುಡುಕಿ ತೆಗೆದು ಅದನ್ನು ತಮ್ಮ ವಶಕ್ಕೆ ಪಡೆದರು ಎನ್ನುತ್ತಾರೆ. ಬಂದೂಕು ಎಷ್ಟು ಪೂಟ ಉದ್ದ ಇತ್ತು ಎಂದರೆ ಸಾಕ್ಷಿ 3 ಅಡಿ ಉದ್ದ ಇರಬಹುದು ಎಂದು ಕೈ ಸನ್ನೆ ಮಾಡಿ ತೋರಿಸುತ್ತಾರೆ. ಬಂದೂಕು 3 ಅಡಿ ಉದ್ದ ಇರಬಹುದು ಎಂದು ಪಂಚನಾಮೆಯಲ್ಲಿ ಅಥವಾ ದೂರಿನಲ್ಲಿ ಬರೆಯಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಮ್ಮ ಮನೆ 67X30 ಅಡಿ ಇದೆ ಎನ್ನುತ್ತಾರೆ. ಆ ಸಮಯದಲ್ಲಿ ನಮ್ಮ ಮನೆ ನಮ್ಮ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ . ಯಾವುದೇ ಘಟನೆ ನಡೆದಿಲ್ಲ, ನಿಮ್ಮ ಮತ್ತು ಪಂಚರ ಸಮಕ್ಷಮ ಪಂಚನಾಮೆ ಮಾಡಿಲ್ಲ, ಯಾವುದೇ ಮು.ಮಾ. ಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹಿತ್ತಲು ಜಾಗೆಗೆ ಹೊಂದಿಕೊಂಡಂತೆ ಆರೋಪಿತನ ಮನೆ ಇರುವುದರಿಂದ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.